**ಲಕ್ಷ್ಮಿ ಮಲಗಿಯೇ ಇದ್ದಳು ಚಿತೆಯ ಮೇಲೆ, ಸೌದೆಗಳನ್ನು ಎದೆಯ ಮೇಲೆ ಹೊತ್ತು. ಆಕೆಯನ್ನೂ ಊಟಕ್ಕಾಗಿ ಎಬ್ಬಿಸಬಹುದಲ್ಲ ಎಂದು ಒಬ್ಬ ಅಂದ. ಇನ್ನೊಬ್ಬ, ಒಮ್ಮೆ ಅಲ್ಲಿಂದ ಎದ್ದರೆ, ಮತ್ತೆ ಆಕೆಯನ್ನು ಹೆಣವಾಗಿ ರೆಡಿ ಮಾಡೋದಕ್ಕೆ ಸಕತ್ ಟೈಮ್ ಹಿಡಿತೈತೆ ಎಂದದ್ದು ಕೇಳಿ ಅವಳ ಎದೆ ಧಸಕ್ಕೆಂದಿತು.**

ಹಕ್ಕಿನ ಎತ್ತಾಕ್ಕೊಂಡ್ ಹೋಯ್ತಾ ಇದ್ದೀಯಾ... ಎಲ್ಲಿಗೇ?' ಹನುಮಂತಪ್ಪ ಸುಮ್ಮನೇ ಹಲ್ಲು ಕಿಸಿದ. ಎಕ್ಸ್‌ಟ್ರಾ ಹೆಂಗಸರ ಬಗ್ಗೆ ಈ ರೀತಿ ಹರಕುಬಾಯಿಂದ ಮಾತಾಡುವುದು ಸಾಮಾನ್ಯವಾಗಿತ್ತು. ಅದನ್ನು ಪ್ರತಿಭಟಿಸಬೇಕು ಎಂದೂ ಈ ಹುಡುಗಿಯರಿಗೆ ಅನ್ನಿಸುತ್ತಿರಲಿಲ್ಲ. ಇಂಥವರ ಮೇಲೆ ಅವರ ಅವಲಂಬನೆ ಅಷ್ಟು ಕ್ರೂರವಾಗಿತ್ತು.

ಲಕ್ಷ್ಮಿಗೆ ಎಲ್ಲಿಲ್ಲದ ಅವಮಾನವಾಯಿತು. ಈ ಕೊಳಕು ಮನುಷ್ಯ ತನ್ನ ಉಬ್ಬಿದ ಹೊಟ್ಟೆಯನ್ನು ನೋಡಿದ್ದರೂ ಹೀಗೇ ಹೇಳುತ್ತಿದ್ದನೇ? ಅಥವಾ ಹೇಳುತ್ತಲೂ ಇರಬಹುದೇನೋ! ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ತಿರುಗಿ ಕುಳಿತಳು, ಅವಮಾನವನ್ನು ನುಂಗಿಕೊಳ್ಳುತ್ತಾ. ಆಕೆಗೆ ಈಗ ಮುಖ್ಯವಾದದ್ದು ತಿನ್ನಲು ಏನಾದರೂ ಸಿಕ್ಕರೆ ಸಾಕು ಎಂಬುದು.

ಶೂಟಿಂಗ್ ಸ್ಪಾಟಿಗೆ ಹೋಗಿ ತಲುಪಿದಾಗ ಬಹಳ ತಡವಾಗಿತ್ತು, ತಿಂಡಿ ಮುಗಿದಿತ್ತು, ಊಟಕ್ಕೆ ಇನ್ನೂ ಸಮಯವಿತ್ತು. ಹೊಟ್ಟೆ ತುಂಬಾ ನೀರು ಕುಡಿದ ನಂತರವೇ ಲಕ್ಷ್ಮಿಗೆ ಇಲ್ಲಿ ತನ್ನ ಕೆಲಸ ಏನಿರಬಹುದು ಎಂದು ತಿಳಿಯುವ ಅಗತ್ಯ ಮೂಡಿದ್ದು. ತನ್ನ ಸ್ಥಿತಿಯಲ್ಲಿ ತಾನು ಗ್ರೂಪ್‌ನಲ್ಲಿ ಡಾನ್ಸ್ ಮಾಡುವುದಂತೂ ಆಗದ ಮಾತು. ಅದು ಹನುಮಂತಪ್ಪನಿಗೂ ಗೊತ್ತಿತ್ತು. ಹಾಗಾದರೆ ತನ್ನ ಕೆಲಸ ಏನು? ಎಷ್ಟು ಹೊತ್ತು ಶೂಟಿಂಗ್? ಎಷ್ಟು ಬಾಟಾ ಸಿಗುತ್ತದೆ? ಅದು ಎಷ್ಟು ದಿನಕ್ಕೆ ಆಗುತ್ತದೆ? ಆಮೇಲೆ ಏನು ಮಾಡುವುದು?...

ಜೋರು ಧ್ವನಿಯಲ್ಲಿ ಮಾತಾಡುತ್ತಾ ಹತ್ತಿರ ಬಂದ ಅಸಿಸ್ಟಂಟ್ ಡೈರೆಕ್ಟರ್ ಆಕೆಯನ್ನು ಮೇಲಿಂದ ಕೆಳಕ್ಕೆ ನೋಡಿ, ಆಗಬಹುದು ಎಂದು ಅನುಮೋದಿಸಿ, ಬೇಗ ಮೇಕಪ್ ಮಾಡಿಕೊಂಡು ರೆಡಿಯಾಗೋದಕ್ಕೆ ಆದೇಶಿಸಿ ಬಂದ ಅವರಸರದಲ್ಲಿಯೇ ಹೊರಟೂ ಹೋದ. ತಾನೇನು ಮಾಡಬೇಕು?

ಮೇಕಪ್‌ಮನ್ ಬಹಳ ಹೊತ್ತು ತೆಗೆದುಕೊಂಡು ಸೂಕ್ಷ್ಮವಾಗಿ ಮೇಕಪ್ ಮಾಡಿದ. ಒಬ್ಬ ಎಕ್ಸ್‌ಟ್ರಾಗೆ ಇಷ್ಟು ಹೊತ್ತು ಮೇಕಪ್? ಮೇಕಪ್‌ಮನ್ ಆಕೆಯ ಎದುರು ಕನ್ನಡಿ ಹಿಡಿದ. ಚಿಕ್ಕ ಕನ್ನಡಿ ಮುಖವಷ್ಟೇ ಕಾಣಿಸುತ್ತಿತ್ತು. ಲಕ್ಷ್ಮಿ ಬಹಳ ಸುಂದರವಾಗಿ ಕಂಡಳು. ತಾನೇ ಒಬ್ಬ ಸ್ಟಾರ್ ಆಗಬಹುದಾಗಿತ್ತು ಎಂಬ ವಿಚಾರ ಒಂದು ಕ್ಷಣ ಆಕೆಯ ಮನಸ್ಸಿನಲ್ಲಿ ಮೂಡಿತು. ಅಷ್ಟರಲ್ಲಿ ಕನ್ನಡಿ ಬದಿಗೆ ಸರಿದಿತ್ತು.

ಹೌದು, ಇವತ್ತು ಆಕೆ ಸ್ಟಾರೇ ಆಗಿದ್ದಳು. ನಿಜವಾದ ಸ್ಟಾರೇ ಅಲ್ಲದಿದ್ದರೂ ಪ್ರಸಿದ್ಧ ಸ್ಟಾರ್ ಸುಕನ್ಯಾಳ ಬಾಡಿ ಡಬಲ್ ಆಗಿ ಅಭಿನಯಿಸುವವಳಿದ್ದಳು. ಇದೂ ಏನೂ ಕಡಿಮೆ ಅವಕಾಶವಲ್ಲ ಎಂದು ಬೀಗುತ್ತಿರುವಾಗಲೇ ಆಕೆಗೆ ಗೊತ್ತಾಗಿದ್ದು, ತಾನು ಸುಕನ್ಯಾಳ ಬದಲಿಗೆ ಒಂದು ಚಿತೆಯ ಮೇಲೆ ಮಲಗಿ, ಹೀರೊ ಚಿತೆಗೆ ಬೆಂಕಿಯಿಡುವ ದೃಶ್ಯದಲ್ಲಿ ಭಾಗವಹಿಸಬೇಕಾಗಿದೆ ಎಂದು.

ಸುಕನ್ಯಾ ಅಮ್ಮ ಯಾವಾಗ ಚಿತೆಯ ದೃಶ್ಯದಲ್ಲಿ ಸುಕನ್ಯಾ ಭಾಗವಹಿಸಲು ಸಾಧ್ಯವೇ ಇಲ್ಲ ಎಂದು ಖಡಾಖಂಡಿತವಾಗಿ ಅದರ ನಂತರ, ಶೂಟಿಂಗ್ ಸ್ಪಾಟಿನ ಒಂದು ಮೂಲೆಯಲ್ಲಿ ಸಂಬಂಧಪಟ್ಟ